**ಒ.ಎಸ್ ನಂ. 6785/2016**

ಪಿ.ಡಬ್ಲ್ಯೂ-1

ದಿನಾಂಕ:26-11-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲು :4 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಪಿ.ಆರ್.ಎಸ್ ರವರಿಂದ</u> :

ನಾನು ಎಸ್ಎಸ್ಎಲ್ಸಿ ತನಕ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಭಾಷ್ಷ ಮತ್ತು ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಹೆಂಡತಿಯ ಹೆಸರು ಸಾವಿತ್ರಿ ವಿಶ್ವನಾಥ್ ಎಂದರೆ ಸರಿ. ನನ್ನ ಹೆಂಡತಿಯು ಸಹ ಎಸ್ಎಸ್ಎಲ್ಸಿ ತನಕ ವ್ಯಾಸಂಗ ಮಾಡಿರುತ್ತಾರೆ. ನನ್ನ ಹೆಂಡತಿಗೆ ಆಂಗ್ಲ ಭಾಷೆ ಮಾತ್ರ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಹೆಂಡತಿ ಮತ್ತು ನನ್ನ ಮಧ್ಯ ಸಂಬಂಧ ಅನ್ಯೊನ್ಯವಾಗಿರುವ ಕಾರಣ ನನ್ನ ಹೆಂಡತಿ ಮಾಡುವ ಎಲ್ಲ ವ್ಯವಹಾರಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇರುತ್ತದೆ ಎಂದರೆ, ಸಾಕ್ಷಿ ನನ್ನ ಹೆಂಡತಿ ಸ್ವತಂತ್ರವಾಗಿ ತಮ್ಮ ವ್ಯವಹಾರಗಳನ್ನು ಮಾಡಿಕೊಳ್ಳುತ್ತಾರೆ ಎಂದರೆ ಹೇಳುತ್ತಾರೆ. ನಾನು 4 ನೇ ಪ್ರತಿವಾದಿಯ ಮುಂದೆ ಈ ಪ್ರಕರಣದಲ್ಲಿ ದಾಖಲಿಸಿರುವ ಈ ಪ್ರಕರಣವಲ್ಲದೇ ಒ.ಎಸ್.ನಂ.7065, 7066, 7068, ಹಾಗು 7070/2016 ದಾವೆಗಳಲ್ಲದೇ ಇದೇ ನ್ಯಾಯಾಲಯದ ಮುಂದೆ ಇರುವ ಬೇರೆ ಪ್ರಕರಣಗಳನ್ನು ಬಿಟ್ಟು ಬೇರೆ ಇನ್ಯಾವುದೇ ನ್ಯಾಯಾಲಯಗಳಲ್ಲಿ ದಾವೆಗಳನ್ನು ಹೂಡಿಲ್ಲ. ನನ್ನ ಮತ್ತು 3 ನೇ ಪ್ರತಿವಾದಿಯ ಮಧ್ಯೆ ಆಬ್ರಿಟ್ರೇಟರ್ ಮುಂದೆ ಆಬ್ರಿಟೇಷನ್ ಪ್ರಕರಣ ಸಂ.87/2017 ಎಂಬ ಪ್ರಕರಣ ನಡೆದಿರುತ್ತದೆ ಎಂದರೆ ಸರಿ. ಸದರಿ ಆಬ್ರಿಟೇಷನ್ ಪ್ರಕರಣದಲ್ಲೂ ಸಹ ಈ ನ್ಯಾಯಾಲಯದ ಮುಂದೆ ಹೇಳಿರುವ ಜಾಯಿಂಟ್ ಡೆವಲಪ್ ಮೆಂಟ್ ಅಗ್ರಿಮೆಂಟ್ ಹಾಗು ಸಾಮಾನ್ಯ ಅಧಿಕಾರ ಪತ್ರದ ದಾಖಲೆಗೆ ಸಂಬಂಧಿಸಿದಂತೆಯೇ ಪ್ರಕರಣ ನಡೆದಿರುತ್ತದೆ ಎಂದರೆ ಸರಿಯಲ್ಲ. ನಾನು, ಸದರಿ ಪ್ರಕರಣದಲ್ಲಿ 4 ನೇ ಪ್ರತಿವಾದಿಗೆ ಕೊಟ್ಟಿದ್ದ ಸಾಮಾನ್ಯ ಅಧಿಕಾರ ಪತ್ರವನ್ನು ಅವರಿಗೆ ಮಾಹಿತಿ ಕೊಡದೇ ಏಕಪಕ್ಷಿಯವಾಗಿ ರದ್ದು ಪಡಿಸಿಕೊಂಡಿದ್ದ ಕಾರಣ 4 ನೇ ಪ್ರತಿವಾದಿ ಆಬ್ರಿಟೇಷನ್ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು, ನಾನು 4 ನೇ ಪ್ರತಿವಾದಿಗೆ ಅಧಿಕಾರ ಪತ್ರ ಬರೆದುಕೊಟ್ಟಿರಲಿಲ್ಲ ಎಂದು ಹೇಳುತ್ತಾರೆ. 4 ನೇ ಪ್ರತಿವಾದಿ ಆಬ್ರಿಟೇಷನ್ ಪ್ರಕರಣದಲ್ಲಿ ಇದೇ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮಿಬ್ಬರ ಮಧ್ಯ ಆಗಿದ್ದ ವ್ಯಾವಹಾರಕ್ಕೆ ಇನ್ನೂ ಕೆಲವು

ಪರಿಹಾರಗಳನ್ನು ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ನಾನು ಅದರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದೆನೆ ಎನ್ನುತ್ತಾರೆ. ನಾನು, ಆಬ್ರಿ ಟೇಷನ್ ಪ್ರಕರಣದಲ್ಲಿ ನನ್ನ ಕಡೆಯಿಂದ ಕೌಂಟರ್ ಕ್ಲೇಮ್ ಗಳನ್ನು ಕೇಳಿಕೊಂಡಿದ್ದೆ ಎಂದರೆ ಸರಿ. ಸದರಿ ಆಬ್ರಿಟೇಷನ್ ಪ್ರಕರಣ ದಿನಾಂಕಃ30.11.2018 ರಂದು ನಾನು, ಏಕಪಕ್ಷಿಯವಾಗಿ ರದ್ದುಪಡಿಸಿದ್ದ ಅಧಿಕಾರ ಪತ್ರ ಊರ್ಜಿತಗೊಳ್ಳುವುದಿಲ್ಲ ಎಂದು ತೀರ್ಮಾನವಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಅದರ ವಿರುದ್ದ ಅಪೀಲು ದಾಖಲಾಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಆಬ್ರಿಟೇಷನ್ ಪ್ರಕರಣದಲ್ಲಿ ನಾನು ಕೇಳಿಕೊಂಡಿದ್ದ ಕೌಂಟರ್ ಕ್ಲೇಮ್ ಗಳೆಲ್ಲವೂ ವಜಾ ಗೊಂಡಿರುತ್ತವೆ ಎಂದರೆ ಸಾಕ್ಷಿ, ದಾಖಲೆ ನೋಡಲು ಹೇಳಲಾಗುವುದಿಲ್ಲ ಎಂದು ಹೇಳುತ್ತಾರೆ. ನಾನು, ಆಬ್ರಿಟ್ರೇಟರ್ ಮಾಡಿರುವ ಅದೇಶವನ್ನು ಪ್ರಶ್ನಿಸಿ ಜಿಲ್ಲಾ ನ್ಯಾಯಾಲಯದ ಮುಂದೆ ಎಎಸ್ ನಂ.241/2018 ಎಂಬ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಈ ಪ್ರಕರಣ ಸಹ ದಿಃ09.07.2021 ರಂದು ವಜಾಗೊಂಡಿರುತ್ತದೆ ಎಂದರೆ ಸರಿ. ನಾನು 4 ನೇ ಪ್ರತಿವಾದಿಯ ವಿರುದ್ದ ಈ ಪ್ರಕರಣಗಳಲ್ಲದೇ ಇನ್ನೂ 6 ಕ್ರಿಮಿನಲ್ ಪ್ರಕರಣಗಳನ್ನು ಹಾಕಿದ್ದೇನೆ. ನಾನು ಸಲ್ಲಿಸಿದ್ದ 6 ಪ್ರಕರಣಗಳ ಪೈಕಿ 5 ಪ್ರಕರಣಗಳಲ್ಲಿ ಪೋಲಿಸರು ಬಿ ಅಂತಿಮ ವರದಿಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ನಾನು ಅವುಗಳನ್ನು ಪ್ರಶ್ನಿಸಿರುತ್ತೇನೆ ಎನ್ನುತ್ತಾರೆ. ಒಂದು ಪ್ರಕರಣದಲ್ಲಿ ಪೋಲಿಸರು ದಾಖಲಿಸಿದ್ದ ದೋಷಾರೋಪಣಾ ಪತ್ರವನ್ನು ಸಲ್ಲಿಸಿ 4 ನೇ ಪ್ರತಿವಾದಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿದ್ದು, ಅದರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ತಡೆಯಾಜ್ಞೆ ನೀಡಿರುತ್ತೆದೆ ಎಂದರೆ ಸರಿ.

ನನ್ನ ಮತ್ತು 4 ನೇ ಪ್ರತಿವಾದಿಯ ಮಧ್ಯೆ ಜಾಯಿಂಡ್ ಡೆವಲೆಪ್ ಮೆಂಟಿನ ಬಗ್ಗೆ ಜೂನ್ 2013 ರಂದು ಮಾತುಕತೆಯಾಗಿರುತ್ತದೆ. ಸಾಕ್ಷಿ ಮುಂದುವಕರೆದು ಅದರಂತೆ ದಿಃ07.08.2013 ರಯಿ ಜಾಯಿಂಟ್ ಡೆವೆಲಪ್ ಮೆಂಟ್ ಅಗ್ರಿಮೆಂಟ್ ಬರೆಯಲಾಯಿತು ಎಂದು ಹೇಳುತ್ತಾರೆ. ನಿ.ಪಿ.1 ಮತ್ತು 2 ದಾಖಲೆಗಳು ನನ್ನ ಮತ್ತು 4 ನೇ ಪ್ರತಿವಾದಿಯ ಮಧ್ಯೆ ಎಲ್ಲ ಮಾತುಕತೆ ಮುಗಿದ ನಂತರ ನಾವಿಬ್ಬರು ಪರಸ್ಪರ ಒಪ್ಪಿಕೊಂಡ ಷರತ್ತುಗಳು ಮತ್ತು ಖಂಡಿಕೆಗಳ ಪ್ರಕಾರವೇ ದಾಖಲೆಗಳು ಬರೆಯಲಾಗಿವೆ ಎಂದರೆ ಸರಿ. ನಿ.ಪಿ.1 ರಲ್ಲಿ ಕಟ್ಟಿರುವ ಕಟ್ಟಡವನ್ನು ಹೇಗೆ ಭಾಗ ಮಾಡಿಕೊಳ್ಳಬೇಕು ಎಂದು ಉಲ್ಲೇಖವಿರುತ್ತದೆ ಎಂದರೆ ಸರಿ. ಆದೇ ರೀತಿ ನಿ.ಪಿ.1 ರಲ್ಲಿ

ಮಾಲಿಕರ ಭಾಗಕ್ಕೆ ಹೋಗುವ ಪ್ಲಾಟುಗಳನ್ನು ಮಾಲಿಕರೇ ಖುದ್ದಾಗಿ ಮಾರಿಕೊಳ್ಳುವುದು. ಅದೇ ರೀತಿ ಡೆವಲಪರ್ ಗಳ ಭಾಗಕ್ಕೆ ಬರುವ ಭಾಗಗಳನ್ನು ಅವರೇ ಮಾರಿಕೊಳ್ಳುವುದು ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಡೆವೆಲಪರ್ ನನ್ನ ಭಾಗದ ಪ್ಲಾಟುಗಳನ್ನು ನನಗೆ ಕೊಟ್ಟ ನಂತರವಷ್ಟೆ ಅವರು ತಮ್ಮ ಭಾಗದ ಪ್ಲಾಟುಗಳನ್ನು ಮಾರಿಕೊಳ್ಳಬಹುದು ಎಂದು ಸ್ಪಷ್ಟ ಉಲ್ಲೇಖ ಇದೆ ಎನ್ನುತ್ತಾರೆ. ನಿ.ಪಿ.1 ರ ದಾಖಲೆಯ ಪ್ರಕಾರ ಒಟ್ಟು 23 ತಿಂಗಳಲ್ಲಿ 4 ನೇ ಪ್ರತಿವಾದಿ ಕಟ್ಟಡ ಕಟ್ಟಿ ಮುಗಿಸಬೇಕು ಎಂದು ಉಲ್ಲೇಖವಿತ್ತು.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**(ಇಶ್ರತ್ ಜಹಾನ್ ಆರಾ)**
**III ನೇ ಎ.ಸಿ.ಸಿ & ಎಸ್.ಜೆ, ಬೆಂಗಳೂರು.**